ಅ) ಅಂಕೋಲಾ ಮತದಾನ ಕ್ಷೇತ್ರದ ಅಂಕೋಲಾ-ಸಿರ್ಸಿ- ಯಲ್ಲಾಪುರ ತಾಲ್ಲೂಕಿನಲ್ಲಿ ರಸ್ತೆ ಸಂಪರ್ಕವಿಲ್ಲದ ಹಳ್ಳಿಗಳೆಷ್ಟು?

ಇ) ಅಂಕೋಲಾ-ಸಿರ್ಸಿ-ಯಲ್ಲಾಪುರ ತಾಲ್ಲೂಕಿನಲ್ಲಿ ಸಂಪರ್ಕವಿಲ್ಲದ ಹಳ್ಳಿಗಳಿಗೆ ರಸ್ತೆ ಮಾಡಲು ಮಂಜೂರಾದ ಹಣವೆಷ್ಟು?

ಈ) ಇಲಾಖೆಯ ಪ್ರತಿ ತಾಲ್ಲೂಕಿನ ವರದಿ ತಯಾರಿಸುವಾಗ ಸರಿಯಾದ ರೀತಿಯಲ್ಲಿ ಮಾಡದೇ ಇರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಿದೆ.

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಗ್ರಾಮೀಣ ರಸ್ತೆಗಳ ಬೃಹತ್ ಯೋಜನೆ 1996ರಲ್ಲಿ ತಯಾರಿಸಿದ್ದು, ಇದರ ಪ್ರಕಾರ 103 ಕಂದಾಯ ಗ್ರಾಮಗಳನ್ನು ಸಂಪರ್ಕರಹಿತವೆಂದು ಗುರುತಿಸಲಾಗಿದೆ.

ಆ) ಅಂಕೋಲಾ ತಾಲ್ಲೂಕಿನಲ್ಲಿ 3 ಗ್ರಾಮಗಳನ್ನು ಸಂಪರ್ಕ ರಹಿತವೆಂದು ಗುರುತಿಸಲಾಗಿದೆ.

ಇ) ಅಂಕೋಲ ತಾಲ್ಲೂಕಿನ 3 ಗ್ರಾಮಗಳಿಗೆ ಒಟ್ಟು 147.00 ಲಕ್ಷ ರೂ.ಗಳನ್ನು ಮಂಜೂರು ಮಾಡಿದೆ.

ಈ) ಈ ವರದಿಯನ್ನು ವೈಜ್ಞಾನಿಕರಾಗಿ ತಯಾರಿಸಲಾಗಿದೆ.

ಉ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ರಸ್ತೆಗಳನ್ನು ಅಗಲಗೊಳಿಸುವುದು.

1784 - ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲಾ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ರಸ್ತೆ ಅಗಲಗೊಳಿಸಲು ಯಾವ ರೀತಿ ಅಳವಡಿಸಲಾಗುತ್ತದೆ?

ಆ) ಈಗ ಎಲ್ಲೆಲ್ಲಿ ರಸ್ತೆ ಅಗಲಗೊಳಿಸುವ ಕೆಲಸ ಪ್ರಾರಂಭವಾಗಿದೆ?

ಇ) ಉತ್ತರ ಕನ್ನಡ ಜಿಲ್ಲೆಯಲ್ಲಿ ಯಾವ ಯಾವ ತಾಲ್ಲೂಕಿನಲ್ಲಿ ರಸ್ತೆ ಅಗಲಗೊಳಿಸಲು ಸರ್ಕಾರ ಆಲೋಚಿಸಿದೆಯೇ?

ಈ) ಉತ್ತರ ಕನ್ನಡ ಜಿಲ್ಲೆಯ ಸಿರ್ಸಿ-ಯಲ್ಲಾಪುರದಲ್ಲಿ ರಸ್ತೆ ವಿಸ್ತರಿಸುವಾಗ ಅಸ್ತಿ ಪಾಸ್ತಿ ನಷ್ಟವಾಗುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಉ) ಸಿರ್ಸಿ-ಯಲ್ಲಾಪುರ ತಾಲ್ಲೂಕಿನಲ್ಲಿ ಬೈಪಾಸ್ ರಸ್ತೆ ಮಾಡುವ ಯೋಜನೆ ಸಿದ್ದವಾಗಿದೆಯೇ?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ರಾಜ್ಯದಲ್ಲಿನ ರಸ್ತೆ ಭೂಮಿಯಲ್ಲಿನ ಅನಧಿಕೃತ ಕಟ್ಟಡಗಳನ್ನು ತೆಗೆದು ರಸ್ತೆ ವಿಸ್ತರಿಸಲಾಗುತ್ತಿದೆ.

ಆ) ದಾವಣಗೆರೆ, ಚಿತ್ರದುರ್ಗ ಜಿಲ್ಲೆಗಳಲ್ಲಿ ಪ್ರಮುಖವಾದ ಪಟ್ಟಣಗಳ ಮಿತಿಯಲ್ಲಿ ಪ್ರಾರಂಭಿಸಲಾಗಿದೆ.

ಇ) ಅನಧಿಕೃತ ಕಟ್ಟಡ ಗುರುತಿಸುವ ಕಾರ್ಯ ಕೈಗೊಳ್ಳಲಾಗಿದೆ.

ಈ) ತೆರವುಗೊಳಿಸಿದಲ್ಲಿ ನಷ್ಟದ ಬಗ್ಗೆ ವಿವರ ಲಭ್ಯವಾಗುತ್ತದೆ.

ಉ) ಇಲ್ಲ.

ಚಾಮರಾಜ ನಗರದಲ್ಲಿ ಹೊಸದಾಗಿ ಲೋಕೋಪಯೋಗಿ ಇಲಾಖೆಗೆ ಸೇರಿಸಲಾದ ರಸ್ತೆಗಳು

1785 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜನಗರದಲ್ಲಿ ಹೊಸದಾಗಿ ಲೋಕೋಪಯೋಗಿ ಇಲಾಖೆಗೆ ಸೇರಿಸಿದ ರಸ್ತೆಗಳು ಎಷ್ಟು?

ಆ) ಈ ರಸ್ತೆಗಳ ದುರಸ್ತಿಯ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಇ) ಪ್ರತಿ ಶಾಸನ ಸಭಾ ಕ್ಷೇತ್ರಗಳಲ್ಲಿ ಎಷ್ಟು ರಸ್ತೆಗಳ ಕಾಮಗಾರಿಯನ್ನು ಕೈಗೊಳ್ಳಲಾಗಿದೆ?

ಈ) ಚಾಮರಾಜನಗರದಲ್ಲಿ ಹಲವಾರು ವರ್ಷಗಳಿಂದ ಕಟ್ಟಡಗಳ ವಾರ್ಷಿಕ ದುರಸ್ತಿಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಚಾಮರಾಜ ನಗರವನ್ನು ಹೊಸ ಜಿಲ್ಲೆಯನ್ನಾಗಿ ಮಾಡಿದ ನಂತರ ಅವಶ್ಯವಿರುವ ಕಟ್ಟಡಗಳ ನಿರ್ಮಾಣಕ್ಕೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಚಾಮರಾಜನಗರ ತಾಲ್ಲೂಕಿನಲ್ಲಿ ಸಂಖ್ಯೆ :9 (ಯು.ಜಿ.ಆರ್) ರಸ್ತೆಗಳನ್ನು 1992ರಲ್ಲಿ ಸೇರಿಸಲಾಗಿದೆ.

ಆ) ಲಭ್ಯ ಮಾಡಿರುವ ಅನುದಾನದಲ್ಲಿ ಕೈಗೆತ್ತಿಕೊಳ್ಳಲಾಗುತ್ತಿದೆ.

ಇ) ಸಾಮಾನ್ಯವಾಗಿ 1 ರಿಂದ 14ರ ವರೆಗೆ ಕೈಗೊಳ್ಳಲಾಗುತ್ತಿದೆ.

ಈ) ಬಂದಿದೆ.